# ಹೆಲ್ಮೆಟ್ ಧರಿಸುವುದು ನಾಗರಿಕ ಕರ್ತವ್ಯ, ಕುಟುಂಬದ ಮೇಲಿನ ಪ್ರೀತಿಯ ಅಭಿವ್ಯಕ್ತಿ




ರಾಜಮಹಾರಾಜರಿಗೆ ಕಿರೀಟದ ಅಲಂಕಾರವಾದರೆ, ಜನಸಾಮಾನ್ಯರ ಪಾಲಿಗೆ ಮುಂಡಾಸೇ ಭೂಷಣ. ಪ್ರಜಾಪ್ರಭುತ್ವ ಯುಗದಲ್ಲಿ ರಾಜರುಗಳಿಲ್ಲದ ಕಾರಣದಿಂದಾಗಿ ಕಿರೀಟಗಳ ಬಳಕೆಯಿಲ್ಲ. ಮುಂಡಾಸಂತೂ ಹಲವು ಪ್ರಾಂತ್ಯಗಳಲ್ಲಿ ಪುರುಷರ ಶಿರೋಭೂಷಣವಾಗಿ ಈಗಲೂ ಜನಪ್ರಿಯ. ವಿಶ್ವದೆಲ್ಲೆಡೆ ಮಾನ್ಯತೆ ಪಡೆದಿರುವ, ಬಳಕೆಯಲ್ಲಿರುವ ಶಿರಸ್ಸಿನ ತೊಡುಗೆ ಹೆಲ್ಮೆಟ್! ಚಿನ್ನದ ಕಿರೀಟವೇ ಪ್ರಜಾಪ್ರಭುತ್ವ ಯುಗದಲ್ಲಿ ಪ್ಲಾಸ್ಟಿಕ್‌ನ ಹೆಲ್ಮೆಟ್ ಆಗಿ ರೂಪಾಂತರಗೊಂಡಂತಿದೆ. ಇದು ಅಲಂಕಾರ ಅಥವಾ ಸಾಮಾಜಿಕ ಸ್ಥಾನಮಾನಕ್ಕಾಗಿ ತೊಡುವ ಆಭರಣವಲ್ಲ. ಅಪಘಾತ ಸಂಭವಿಸಿದರೆ ತಲೆಗೆ ರಕ್ಷಣೆ ದೊರೆಯಲಿ ಎನ್ನುವ ಕಾರಣಕ್ಕಾಗಿ ಹೆಲ್ಮೆಟ್ ಧರಿಸಲಾಗುತ್ತದೆ. ತಲೆಯನ್ನು ರಕ್ಷಿಸುವ ಮೂಲಕ ಜೀವವನ್ನೂ ಹೆಲ್ಮೆಟ್ ರಕ್ಷಿಸುತ್ತದಾದರೂ ಅದನ್ನು ಧರಿಸಲು ಸಾಕಷ್ಟು ಜನ ಹಿಂಜರಿಯುತ್ತಾರೆ. ಹೆಲ್ಮೆಟ್ ಧರಿಸುವುದನ್ನು ಶಿಕ್ಷೆಯೆಂದು ಭಾವಿಸುತ್ತಾರೆ. ಈ ಜೀವರಕ್ಷಕ ಶಿರಸ್ತ್ರಾಣದ ಮಹತ್ವ ಹಾಗೂ ಅದರ ವಿಕಾಸವನ್ನು ಚಿತ್ರಿಸುವ ಈ ವಿಸ್ತೃತ ಲೇಖನವನ್ನು, ಹೆಲ್ಮೆಟ್ ಬಳಕೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಳಕಳಿಯಿಂದ 'ಸುಧಾ' ಪ್ರಕಟಿಸುತ್ತಿದೆ.

■ ಇ.ಎಸ್. ಸುಧೀಂದ್ರ ಪ್ರಸಾದ್